ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue- 4, September - October 2026, Pp. 28-33
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ‘ಪುನರ್ಜೀವನ’ ಕಥೆಯಲ್ಲಿ ಸ್ತ್ರೀ ಹಾಗೂ ರಾಜಕಾರಣದ ಮುಖಾಮುಖಿ

**ಡಾ. ಕವಿತಾ ಬಿ. ಎನ್**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಂಗಪಟ್ಟಣ.

***Abstract:***
*‘ಪುನರ್ಜೀವನ’ ಕಥೆಯಲ್ಲಿ ಸ್ತ್ರೀ ಮತ್ತು ರಾಜಕಾರಣದ ನಡುವಿನ ಸಂಕೀರ್ಣ ಸಂಬಂಧವನ್ನು ಐತಿಹಾಸಿಕ ಹಾಗೂ ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಅ.ನ.ಕೃಷ್ಣರಾಯರು ಅಕ್ಬರ್ ಮತ್ತು ರಾಣಾ ಪ್ರತಾಪರ ಕಾಲಘಟ್ಟದ ರಾಜಕೀಯ ಸಂಘರ್ಷವನ್ನು ಆಧಾರವಾಗಿಸಿಕೊಂಡು ಸ್ತ್ರೀಯ ಅಸ್ಮಿತೆ, ಸ್ವಾತಂತ್ರ್ಯ ಮತ್ತು ಮಾನದ ಪ್ರಶ್ನೆಗಳನ್ನು ಕಥೆಯಲ್ಲಿ ಪ್ರತಿಪಾದಿಸಿದ್ದಾರೆ. ಯೋಷಿ ಪಾತ್ರದ ಮೂಲಕ ಪುರುಷಪ್ರಧಾನ ಅಧಿಕಾರ ವ್ಯವಸ್ಥೆಯನ್ನು ಪ್ರಶ್ನಿಸುವ ಹಾಗೂ ಅನ್ಯಾಯದ ವಿರುದ್ಧ ಪ್ರತಿರೋಧಿಸುವ ಸ್ತ್ರೀಶಕ್ತಿಯನ್ನು ಕಥೆ ಅನಾವರಣಗೊಳಿಸುತ್ತದೆ. ಅಧಿಕಾರ, ವೈವಾಹಿಕ ರಾಜತಂತ್ರ, ಸ್ತ್ರೀ ಸ್ವಾತಂತ್ರ್ಯ, ಮಾನ–ಅಪಮಾನ ಮತ್ತು ರಾಜಕೀಯ ನೈತಿಕತೆಯ ನಡುವಿನ ಸಂಘರ್ಷಗಳು ಕಥೆಯ ಪ್ರಮುಖ ಆಶಯಗಳಾಗಿ ಮೂಡಿಬಂದಿವೆ. ಒಟ್ಟಾರೆ, ‘ಪುನರ್ಜೀವನ’ ಕಥೆಯು ಸ್ತ್ರೀಯ ಪ್ರತಿರೋಧದ ಮೂಲಕ ಸಮಾಜಮುಖಿ, ನೈತಿಕ ಮತ್ತು ಮಾನವೀಯ ರಾಜಕಾರಣದ ಅಗತ್ಯವನ್ನು ಪ್ರತಿಪಾದಿಸುವ ಕೃತಿಯಾಗಿ ಗಮನಾರ್ಹವಾಗಿದೆ.*

***Keywords:*** *ಪುನರ್ಜೀವನ, ಸ್ತ್ರೀವಾದ, ರಾಜಕಾರಣ, ಸ್ತ್ರೀ ಅಸ್ಮಿತೆ, ಪ್ರತಿರೋಧ.*

## ಪೀಠಿಕೆ

ಭಾಷೆಯು ಕಾಲ–ದೇಶಗಳ ಸಂಬಂಧದ ದೀರ್ಘ ಪಯಣ. ಇದು ಸಮಕಾಲೀನ ವಿಚಾರಗಳೊಂದಿಗೆ ಮುಖಾಮುಖಿಗೊಳಿಸುತ್ತಾ ವರ್ತಮಾನದ ನಿಜತ್ವವನ್ನು ನಿರ್ಮಿಸುವ ಸಾಧನವಾಗಿದೆ. ಇಂಥ ಭಾಷೆಯು ಭಾವನಾತ್ಮಕ ಸಂಗತಿಗಳ ಅಭಿವ್ಯಕ್ತಿಯೂ ಹೌದು. ನಾಟಕವು ಪಾತ್ರಗಳೊಂದಿಗೆ ಸಂಭಾಷಿಸುತ್ತಾ ಅದರ ವಸ್ತು ಹಾಗೂ ನೆಲೆಗಳನ್ನು ಅಭಿವ್ಯಕ್ತಿಗೊಳಿಸಿದರೆ, ಕಥೆಗಳು ಘಟನೆಗಳ ಮೂಲಕ ಅಸ್ತಿತ್ವದ ಶೋಧಕಾರ್ಯವನ್ನು ನಡೆಸುತ್ತ ಸಾಗುತ್ತವೆ. ಕನ್ನಡ ಕಥೆಗಳು ಇಂಥ ಹಲವು ವಿಚಾರಗಳಲ್ಲಿ ಸ್ತ್ರೀಲೋಕವೊಂದನ್ನು ಸೃಷ್ಟಿಸುತ್ತಲೇ ಬದುಕಿನ ನಿರೂಪಣೆಯನ್ನು ವಿಭಿನ್ನ ನೆಲೆಯಲ್ಲಿ ಕಟ್ಟಿಕೊಟ್ಟಿವೆ. ವ್ಯಕ್ತಿಯ ನಿಲುವಿನಿಂದಲೇ ಸಮಷ್ಟಿ ಪ್ರಜ್ಞೆ ಹಾಗೂ ಸ್ತ್ರೀಪ್ರಜ್ಞೆ, ಸಂಸ್ಕೃತಿಯ ಅಸ್ತಿತ್ವದ ಪ್ರಶ್ನೆ ಮುಂತಾದ ವೈಚಾರಿಕ ನಿಲುವುಗಳು ಸಮಾಜದ ಸಂಬಂಧದ ಎಳೆಯಲ್ಲಿ ಅನುಭವೀಕರಿಸಲ್ಪಟ್ಟಿರುವುದು ಕನ್ನಡ ಕಥೆಗಳ ವಿಶೇಷವೂ ಹೌದು.

ಸೃಜನಶೀಲ ಕಥೆಗಾರರು ಇಂಥ ಸಂಬಂಧಗಳ ಬೆಸುಗೆ, ಭಾವನಾತ್ಮಕ ಮಿಡಿತ, ದುಃಖ–ದುಮ್ಮಾನಗಳ ಕಾರಣ ಹಾಗೂ ಹುಡುಕಾಟದ ಹಲವು ವಿಚಾರಗಳಲ್ಲಿ ಮನುಷ್ಯನ ಮನಸ್ಸನ್ನು ಗಾಢವಾಗಿ ಕಲಕುತ್ತಾನೆ. ಮುಖ್ಯವಾಗಿ ನವೋದಯದ ನಂತರ ಕಾಣಿಸಿಕೊಂಡ ಪ್ರಗತಿಶೀಲ ಸಾಹಿತ್ಯದಲ್ಲಿ ಸ್ತ್ರೀ ಕಾಣಿಸಿಕೊಳ್ಳುವ ಬಗೆ, ಆಕೆಯ ಬವಣೆ ಹಾಗೂ ಸ್ವಾತಂತ್ರ್ಯಕ್ಕಾಗಿ ಆಕೆಯ

***Please cite this article as:*** ಕವಿತಾ, ಬಿ. ಎನ್. (2026). ‘ಪುನರ್ಜೀವನ’ ಕಥೆಯಲ್ಲಿ ಸ್ತ್ರೀ ಹಾಗೂ ರಾಜಕಾರಣದ ಮುಖಾಮುಖಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(4), 28–33

ತುಡಿತವನ್ನು ಅಭಿವ್ಯಕ್ತಿಸುವ ದೃಷ್ಟಿಯನ್ನು ಆ ಕಾಲಘಟ್ಟದ ಕಥೆಗಾರರು ತಮ್ಮ ಕಥಾಹಂದರದಲ್ಲಿ ಹೆಣೆದಿದ್ದಾರೆ. ಆ ಮೂಲಕ ಸ್ತ್ರೀಲೋಕಕ್ಕೆ ನ್ಯಾಯವನ್ನು ಒದಗಿಸುವ ಅಥವಾ ಅನ್ಯಾಯಗಳ ತೀವ್ರತೆಯ ವಿರುದ್ಧ ಪ್ರತಿರೋಧಿಸುವ ತಂತ್ರದ ಮೂಲಕವೇ ನ್ಯಾಯವನ್ನೊದಗಿಸುವ ಅಂತಃಕರಣದ ಅಭಿವ್ಯಕ್ತಿಯಾಗಿ ಕಥೆಗಳು ಮೂಡಿಬಂದಿರುವುದು ಶ್ಲಾಘನೀಯ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸ್ತ್ರೀತ್ವದ ಸಂಬಂಧವಾಗಿ ಸಮಾಜದಲ್ಲಿನ ಪರಿಸ್ಥಿತಿ ಹಾಗೂ ಅದರ ಪರಿಣಾಮಗಳನ್ನು ಅತ್ಯಂತ ಸಮರ್ಥವಾಗಿ ಮುಖಾಮುಖಿಗೊಳ್ಳುವ ಸ್ತ್ರೀ ಮನೋಭಾವ ಸ್ವಾಗತಾರ್ಹವಾಗಿದೆ.

**‘ಪುನರ್ಜೀವನ’ ಕಥೆಯ ಐತಿಹಾಸಿಕ ಹಿನ್ನೆಲೆ**

ಅ.ನ.ಕೃಷ್ಣರಾಯರ ‘ಪುನರ್ಜೀವನ’ ಕಥೆಯು ಮೊಘಲ್ ಸಾಮ್ರಾಟ ಅಕ್ಬರ್ ಹಾಗೂ ರಜಪೂತ ವಂಶದ ರಾಜ ರಾಣಾ ಪ್ರತಾಪ ಸಿಂಹನ ನಡುವೆ ಸಾರ್ವಭೌಮತ್ವಕ್ಕಾಗಿ ನಡೆದ ಸಂಘರ್ಷದ ಚಾರಿತ್ರಿಕ ವಸ್ತುವನ್ನು ಆಧರಿಸಿಕೊಂಡು, ರಾಜಕಾರಣದ ನೈತಿಕತೆ ಮತ್ತು ಸ್ತ್ರೀಯ ಅಭಿವ್ಯಕ್ತಿಯ ನೆಲೆಯಲ್ಲಿ ರೂಪುಗೊಂಡಿದೆ. ಅಕ್ಬರ್ ಚಕ್ರವರ್ತಿಯು ಭಾರತದ ಬಹುತೇಕ ರಾಜರನ್ನು, ವಿಶೇಷವಾಗಿ ರಜಪೂತ ರಾಜರನ್ನು, ವೈವಾಹಿಕ ಮೈತ್ರಿಯ ರಾಜತಾಂತ್ರಿಕ ನೀತಿಯ ಮೂಲಕ ತನ್ನ ಅಧೀನಕ್ಕೆ ಒಳಪಡಿಸಿಕೊಂಡವನು. ಆದರೆ ಮೇವಾಡದ ರಜಪೂತ ವಂಶದ ರಾಣಾ ಪ್ರತಾಪ ಸಿಂಹನೊಂದಿಗೆ ಅಕ್ಬರನ ನಿರಂತರ ಸಂಘರ್ಷ ನಡೆಯುತ್ತಿತ್ತು.

ಅಕ್ಬರನ ಅಧೀನತೆಗೆ ಸಮ್ಮತಿಸುವುದು ರಾಣನಿಗೆ ಮೇವಾಡದ ಸ್ವಾತಂತ್ರ್ಯವನ್ನು ಮಾರಿಕೊಂಡಂತಾಗುತ್ತದೆ ಎಂಬುದು ಅವನ ನಿಲುವಾಗಿತ್ತು. ಇದು ಕೇವಲ ರಾಣನ ಅಭಿಪ್ರಾಯವಾಗಿದ್ದರೆ ಅಕ್ಬರನಿಗೆ ದೊಡ್ಡ ಸವಾಲಾಗುತ್ತಿರಲಿಲ್ಲ. ಆದರೆ ರಜಪೂತ ಮನೆತನದ ಸ್ತ್ರೀಯರೆಲ್ಲರ ಒಕ್ಕೊರಲಿನ ಧ್ವನಿಯಾಗಿದ್ದ ನೈತಿಕ ಪ್ರತಿರೋಧವು ಅಕ್ಬರನ ಸಾಮ್ರಾಜ್ಯ ನಿರ್ಮಾಣದ ಸಂಘರ್ಷಕ್ಕೆ ಮತ್ತಷ್ಟು ಸವಾಲು ತಂದಿತು. ಅಕ್ಬರನ ರಾಜಕಾರಣ ಕೇವಲ ಅಧಿಕಾರ ಮತ್ತು ಸಾಮ್ರಾಜ್ಯ ವಿಸ್ತರಣೆಯದ್ದಾಗಿತ್ತೇ? ಎಂಬ ಪ್ರಶ್ನೆಯೇ ಇಲ್ಲಿ ಬಹುಮುಖ್ಯವಾಗಿ ಕಾಣಿಸಿಕೊಳ್ಳುತ್ತದೆ.

ಕಥೆಯ ಆರಂಭದ ನಿರೂಪಣೆಯಲ್ಲಿಯೇ, “ಯೋಷಿ ಪೃಥ್ವಿರಾಜನ ಪತ್ನಿ. ಯೋಷಿಬಾಯಿಯೋ ಯೋಷಿಬೇಗಮ್ಮೋ ತಿಳಿಯದು. ಬೇಗಮ್ ಎನಿಸಿಕೊಳ್ಳಲು ಯೋಷಿ ಒಪ್ಪಳು; ಪತಿಬಿಡ” ಎಂಬ ಮಾತು ಪುರುಷಾಧಾರಿತ ನೆಲೆಯಲ್ಲಿ ಸ್ತ್ರೀಯ ಅಸ್ಮಿತೆ ಮತ್ತು ಸ್ವಾತಂತ್ರ್ಯದ ನಿಲುವನ್ನು ಆಲೋಚಿಸುವ ಪುರುಷಪ್ರಧಾನ ಸಮಾಜದ ವಾಸ್ತವ ಪ್ರತಿಬಿಂಬದಂತೆ ಭಾಸವಾಗುತ್ತದೆ. ಈ ಒಪ್ಪದ ಸಂಗತಿಗಳೇ ಮುಂದೆ ಪ್ರಶ್ನೆಯ ರೂಪ ತಾಳಿ, ಅವುಗಳಿಗೆ ಸಾಕ್ಷಿಯೆಂಬಂತೆ ನಿರೂಪಿತಳಾಗುವ ಕಥಾನಾಯಕಿಯೇ ಯೋಷಿ.

**ಯೋಷಿಯ ಸ್ತ್ರೀ ಅಸ್ಮಿತೆ ಮತ್ತು ಪ್ರತಿರೋಧ**

ಸ್ತ್ರೀ ತನ್ನ ಮಾನ–ಅಭಿಮಾನಕ್ಕೆ ಧಕ್ಕೆ ಬಂದಾಗ ರಾಜಪ್ರಭುತ್ವವನ್ನೇ ಧಿಕ್ಕರಿಸುವ ಛಲಗಾತಿಯಾಗುತ್ತಾಳೆ ಎಂಬುದಕ್ಕೆ ಯೋಷಿಯೇ ಸಾಕ್ಷಿ. ಪರಪುರುಷನು ಸ್ತ್ರೀಯನ್ನು ಬಲಾತ್ಕರಿಸುವ ನೋಟವಾಗಲಿ, ದೈಹಿಕ ದೌರ್ಜನ್ಯವಾಗಲಿ, ಅದು ಸಹಿಸುವಂಥದ್ದಲ್ಲ. ಅಂತಹ ಸಂದರ್ಭದಲ್ಲಿ ಸಹನೆಯ ಕಟ್ಟೆಯೇ ಒಡೆಯುವಂತಾಗುತ್ತದೆ. ಸಾಮ್ರಾಜ್ಯ ವಿಸ್ತರಣೆಯ ರಾಜಕಾರಣ ಕೇವಲ ಅಧಿಕಾರದ ಬಲಪಡಿಸುವಿಕೆಯಲ್ಲಿ ಮಾತ್ರ ನಿಲ್ಲಬೇಕು; ಅದು ಸ್ತ್ರೀಯರ ಮೇಲೆ ನಡೆಯುವ ದೌರ್ಜನ್ಯದ ರಾಜಕಾರಣವಾಗಬಾರದು ಎಂಬ ನೈತಿಕತೆಯ ಪ್ರಶ್ನೆ ಇಲ್ಲಿ ಎದುರಾಗುತ್ತದೆ.

ಸಾಮ್ರಾಜ್ಯ ವಿಸ್ತರಣೆಗಾಗಿ ವೈವಾಹಿಕ ಸಂಬಂಧವನ್ನು ರಾಜತಾಂತ್ರಿಕ ನೀತಿಯನ್ನಾಗಿ ಬಳಸುವ ಅಕ್ಬರನ ಮನೋಭಾವವನ್ನು ಯೋಷಿ ಘಂಟಾಘೋಷವಾಗಿ ಪ್ರಶ್ನಿಸುತ್ತಾಳೆ. ವೈವಾಹಿಕ ಸಂಬಂಧದ ಹೆಸರಿನಲ್ಲಿ ರಜಪೂತ ಹೆಣ್ಣುಮಕ್ಕಳ ಹೆಸರು ಮತ್ತು ಅಸ್ಮಿತೆಯನ್ನು ಬದಲಾಯಿಸುವ ಪ್ರಯತ್ನಕ್ಕೆ ಕಾರಣವೇನು? ಇದು ಸ್ತ್ರೀ ಸ್ವಾತಂತ್ರ್ಯಕ್ಕೆ

ಧಕ್ಕೆಯಲ್ಲವೇ? ಎಂಬ ಪ್ರಶ್ನೆಗಳು ಕಥೆಯಲ್ಲಿ ಗಂಭೀರವಾಗಿ ಮೂಡಿಬರುತ್ತವೆ. ಸ್ತ್ರೀಯ ವೈಯಕ್ತಿಕ ಅಸ್ಮಿತೆಯನ್ನು ಗೌರವಿಸದ ಅಧಿಕಾರ ವ್ಯವಸ್ಥೆಯ ನೈತಿಕತೆಯನ್ನೇ ಯೋಷಿ ಪ್ರಶ್ನಿಸುತ್ತಾಳೆ.

**ರಾಜಕಾರಣದ ತಂತ್ರ ಮತ್ತು ಯೋಷಿಯ ವಿಚಾರಶಕ್ತಿ**

ಯೋಷಿ ರಾಜಕಾರಣದ ತಂತ್ರಗಾರಿಕೆಯನ್ನು ಸರಿಯಾಗಿ ಅರ್ಥೈಸಿಕೊಂಡವಳು. ಅಕ್ಬರನ ಆಳ್ವಿಕೆಯ ಸೂಕ್ಷ್ಮತೆಯನ್ನು ಅರಿತ ಆಕೆ, ರಾಜಕಾರಣದಲ್ಲಿ ಆತ ನಿಲ್ಲಲು ಇರುವ ಸಾಧ್ಯತೆಗಳೇನು ಎಂಬುದನ್ನು ಗ್ರಹಿಸಿಕೊಂಡವಳು. ಹಾಗಾಗಿ ಕಥಾನಾಯಕಿಯಾದ ಯೋಷಿ ತನ್ನ ಪತಿಯಾದ ಪೃಥ್ವಿರಾಜನನ್ನು ಕುರಿತು ಎಚ್ಚರಿಕೆಯ ಮಾತುಗಳನ್ನಾಡುತ್ತಾಳೆ.

ರಾಜಕಾರಣವೆಂಬುದು ಅಧಿಕಾರದ ಸದ್ಬಳಕೆ ಆಗಬೇಕು. ಅದು ಮಾರ್ಗದರ್ಶನದಂತೆ ಉತ್ತರಾಧಿಕಾರವನ್ನು ನಿರೀಕ್ಷಿಸುವವರಿಗೆ ಸನ್ಮಾರ್ಗವನ್ನು ತೋರಿಸಬೇಕು. ಇಂತಹ ಉತ್ತಮ ರಾಜಕಾರಣ ಸಮಾಜದ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಮೊಘಲರ ಸಾಮ್ರಾಜ್ಯ ವಿಸ್ತರಣೆಗೆ ಹಿಂದೂ ಹೆಣ್ಣುಮಕ್ಕಳನ್ನು ರಾಜತಾಂತ್ರಿಕ ನೀತಿಯ ಭಾಗವನ್ನಾಗಿ ರೂಪಿಸಿಕೊಂಡದ್ದು ಎಷ್ಟು ಸರಿ ಎಂಬ ಪ್ರಶ್ನೆಯೂ ಇಲ್ಲಿ ಉದ್ಭವಿಸುತ್ತದೆ.

ವೈವಾಹಿಕ ಸಂಬಂಧಗಳು ನಿಸ್ವಾರ್ಥತೆಯಿಂದ ಕೂಡಿರಬೇಕೇ ಹೊರತು ಸ್ವಾರ್ಥಸಾಧನೆಗಾಗಿ ರೂಪಿಸಿಕೊಂಡ ವೈವಾಹಿಕ ಸಂಬಂಧಗಳು ಸುಖವನ್ನು ನೀಡಲಾರವು ಎಂಬ ತತ್ವವನ್ನು ಅರಿಯಬೇಕಿದೆ. ವ್ಯಕ್ತಿಯ ಅಭಿಪ್ರಾಯಗಳನ್ನು ಹತ್ತಿಕ್ಕುವ ರಾಜಕಾರಣವು ದುರಾಡಳಿತದ ಕರಾಳ ಛಾಯೆಯಂತಾಗುತ್ತದೆ. ರಾಜನ ಆಜ್ಞೆಗಳು ಪ್ರಜೆಗಳ ಪಾಲನೆಯ ಮಾರ್ಗದರ್ಶಕವಾಗಿರಬೇಕೇ ಹೊರತು ಶಿಕ್ಷೆಯ ರೂಪವಾಗಬಾರದು. ಇಲ್ಲವಾದರೆ ಅದು ರಾಜಕಾರಣದ ಸೋಲನ್ನು ಬಿಂಬಿಸುತ್ತದೆ ಎಂಬುದು ಕಥೆಯಲ್ಲಿ ಪರೋಕ್ಷವಾಗಿ ಅಭಿವ್ಯಕ್ತವಾಗುತ್ತದೆ.

**ಸ್ತ್ರೀ ಸ್ವಾತಂತ್ರ್ಯ ಮತ್ತು ರಾಷ್ಟ್ರಪ್ರಜ್ಞೆ**

ರಾಷ್ಟ್ರ ಮತ್ತು ಧರ್ಮ ಎರಡೂ ಬೌದ್ಧಿಕ ನೆಲೆಯಲ್ಲಿ ರೂಪುಗೊಂಡ ಪರಿಕಲ್ಪನೆಗಳಾಗಿವೆ. ಈ ಎರಡೂ ನೆಲೆಗಳು ಮಾನವನ ಸಂಸ್ಕೃತಿಯ ಕೊಂಡಿಗಳಾಗಿ ಬೆಸೆದುಕೊಂಡಿರುತ್ತವೆ. ಒಂದು ಸಮೂಹಪ್ರಜ್ಞೆಯಾದರೆ, ಮತ್ತೊಂದು ಸಮುದಾಯದ ಪ್ರಜ್ಞೆಯಾಗಿದೆ. ಹಾಗಾಗಿ ಸಮುದಾಯದ ಹಿನ್ನೆಲೆಯಲ್ಲಿ ರಾಷ್ಟ್ರವನ್ನು ಗಮನಿಸಿದಾಗ ತೊಡಕುಗಳು ಹೆಚ್ಚಾಗುತ್ತವೆ. ಅದನ್ನು ಹೊರತುಪಡಿಸಿ ಸಮೂಹಪ್ರಜ್ಞೆಯಲ್ಲಿ ರಾಷ್ಟ್ರವನ್ನು ಕಂಡಾಗ ಮಾತ್ರ ಏಳಿಗೆಯ ದಾರಿ ಸುಗಮವಾಗುತ್ತದೆ.

ಇಲ್ಲಿ ಹಿಂದೂ ರಾಷ್ಟ್ರದ ಧರ್ಮ ಎಂದು ಸಂಬೋಧಿಸುವ ಮಾತಿನ ಹಿಂದೆ ಸಾಂಸ್ಕೃತಿಕ ನೆಲೆಯಲ್ಲಿ ಧರ್ಮವನ್ನು ಕುರಿತು ಮಾತನಾಡುವಂತಿದೆ. ಆ ಸಂಸ್ಕೃತಿಯಲ್ಲಿ ರೀತಿ–ನೀತಿ, ನಡವಳಿಕೆ ಎಲ್ಲವೂ ಅಡಕಗೊಂಡಿವೆ. ಇದಕ್ಕೆ ಅಡ್ಡಿಯಾಗುವ ಸನ್ನಿವೇಶವನ್ನು ಕುರಿತು ಮಾತನಾಡುವ ಸಂದರ್ಭವನ್ನು ಇಲ್ಲಿ ಗಮನಿಸಬಹುದು. “ರಾಷ್ಟ್ರದವರೆಲ್ಲರೂ ಧರ್ಮವನ್ನು ಮರೆತಿರುವರು; ಇಹ–ಪರ ಸುಖಕ್ಕೆ ಸಾಧನವಾದ ಮಾತೃಬಂಧ ವಿಮೋಚನ ಕಾರ್ಯವನ್ನು ತಮ್ಮಂತೆ ಸಂಪೂರ್ಣವಾಗಿ ಅವರು ತ್ಯಾಜ್ಯ ಮಾಡಿರುವವರು” ಎಂಬ ನುಡಿಗಳು ಸ್ತ್ರೀಯನ್ನು ಬಂಧಿಯಾಗಿಸುವ ದೌರ್ಜನ್ಯದ ಸಂಗತಿಯನ್ನು ಬಯಲುಮಾಡುತ್ತವೆ.

ಸ್ತ್ರೀ ಸಮಾನತೆ ಇಲ್ಲದಿದ್ದರೆ, ಸ್ವಾತಂತ್ರ್ಯವಿಲ್ಲದಿದ್ದರೆ ಅದು ನೈತಿಕ ಧರ್ಮವಾಗಲಾರದು. ಅದು ರಾಷ್ಟ್ರದ ಪ್ರಗತಿಗೂ ಕುಂಠಿತವಾದದ್ದು. ನೈತಿಕ ಧರ್ಮವನ್ನು ಮರೆತವರಲ್ಲಿ ರಾಷ್ಟ್ರವನ್ನು ಸುಭದ್ರವಾಗಿ ಕಟ್ಟುವುದನ್ನು ನಿರೀಕ್ಷಿಸಲಾಗದು.

**ಯೋಷಿಯ ಪ್ರತಿರೋಧದ ಧ್ವನಿ**

ಈ ನೆಲೆಯಲ್ಲಿ ನಡೆಯುತ್ತಿರುವ ದೌರ್ಜನ್ಯ ಹಾಗೂ ಅದನ್ನು ಪ್ರತಿರೋಧಿಸದಿರುವುದು ಕೂಡ ರಾಷ್ಟ್ರದ ಒಳಿತಿನ ದೃಷ್ಟಿಯಿಂದ ಅಪಾಯಕಾರಿ

ಯಾಗಿದೆ. ದಾಸ್ಯತನವು ಮಾನವನ ಹಕ್ಕನ್ನೇ ಕಸಿದುಕೊಳ್ಳುತ್ತದೆ. ಇಂಥ ದಾಸ್ಯತನದ ಬದುಕು ಸಹ್ಯವಲ್ಲ. ಅದಕ್ಕಾಗಿ ಯೋಷಿ, "ನಿಮ್ಮ ಸಾಮ್ರಾಟನೇನು ನನಗೆ ಹೊಸಬನಲ್ಲ. ಸಾಮ್ರಾಟನ ನಡವಳಿಕೆಗಳನ್ನು ಅರಿಯದಷ್ಟು ಅಜ್ಞಳೇನಲ್ಲ. ಪರಸ್ತ್ರೀಯರನ್ನೇ ಸದಾ ಬಯಸುತ್ತಾ, ಸ್ವಸುಖದಲ್ಲಿಯೇ ಮಗ್ನನಾಗಿ, ಅಜ್ಞರಾದ ನಿಮ್ಮಂತಹ ಹಿಂದೂಗಳಿಗೆ ಅಲ್ಪಸ್ವಲ್ಪ ಆಶೆ ತೋರಿಸಿ ಜಾತಿ–ಮಾನಗಳನ್ನು ಕೆಡಿಸುತ್ತಿರುವ ನರಾಧಮನವನು. ನಿಮ್ಮ ಕಣ್ಣಿಗೆ ಮನ್ಮಥನಂತೆ ಕಂಡುಬಂದರೂ ನನಗವನು ಮಹಿಷಾಸುರನೇ" ಎಂದು ಹೇಳುತ್ತಾಳೆ.

ಈ ಮಾತಿನ ಗಂಭೀರತೆಯನ್ನು ಅರಿಯಬೇಕು. ಪರಸ್ತ್ರೀಯರ ಸಂಗವನ್ನು ಸದಾ ಬಯಸುವ, ಸ್ವಸುಖದಲ್ಲಿ ಲೀನರಾಗಿರುವವರಲ್ಲಿ ರಾಷ್ಟ್ರದ ಒಳಿತನ್ನು ಮತ್ತು ಏಳಿಗೆಯನ್ನು ಗ್ರಹಿಸಲು ಸಾಧ್ಯವೇ? ಎಂಬ ಪ್ರಶ್ನೆ ಇಲ್ಲಿ ಮೂಡುತ್ತದೆ. ಅದು ಆಡಳಿತದ ದೋಷಕ್ಕೆ ದಾರಿ ಮಾಡಿಕೊಡುತ್ತದೆ. ಮನುಷ್ಯನ ದೌರ್ಬಲ್ಯವೇ ರಾಜಕಾರಣದಲ್ಲಿ ಕಂಟಕವನ್ನು ತಂದೊಡ್ಡುತ್ತದೆ ಎಂಬ ಸತ್ಯದರ್ಶನದ ಸ್ಪಷ್ಟ ನುಡಿಗಳು ರಾಜಕಾರಣದ ಸೋಲಿನ ಮುಖವನ್ನು ಶೋಧಿಸಿದಂತೆ ಭಾಸವಾಗುತ್ತವೆ.

**ಪೃಥ್ವಿರಾಜನ ಪಾತ್ರ ಮತ್ತು ರಾಜಕೀಯ ಪ್ರತಿರೋಧ**

ರಜಪೂತ ಸ್ತ್ರೀಯರಿಗೂ ಅವರದೇ ಆದ ಸ್ವಾತಂತ್ರ್ಯ ಮತ್ತು ಹಕ್ಕುಗಳು ಏಕೆ ಇರಬಾರದು ಎಂಬ ಪ್ರತಿರೋಧದ ಕಿಡಿ ಕೇವಲ ಯೋಷಿಯದ್ದಲ್ಲ. ಅದು ರಜಪೂತ ಸಮುದಾಯದ ಹಾಗೂ ಸ್ತ್ರೀ ಸಮುದಾಯದ ಧ್ವನಿಯಾಗಿದೆ. 'ಖುಸ್ ರೋಜ್' ಹಬ್ಬದ ದಿನವನ್ನು ಆಚರಿಸಲು ಅಕ್ಬರ್ ನೀಡುವ ಆಜ್ಞೆಯಲ್ಲಿ ಎಲ್ಲಾ ಸ್ತ್ರೀಯರು ಈ ಔತಣದಲ್ಲಿ ಭಾಗವಹಿಸಲೇಬೇಕೆಂಬುದು ಎಷ್ಟು ಸರಿ? ಈ ಔತಣ ಹಾಗೂ ವಸ್ತುಪ್ರದರ್ಶನಕ್ಕೆ ಸ್ವಯಂ ಇಚ್ಛೆಯ ಅಗತ್ಯವಿಲ್ಲವೇ? ರಾಜಕಾರಣವೆಂಬುದು ಕೇವಲ ಆಜ್ಞೆಯೇ ಅಥವಾ ಅದು ಪ್ರಜೆಗಳ ಇಚ್ಛೆಯನ್ನು ಅರಿಯುವುದೂ ಆಗಬೇಕೇ? ಎಂಬುದು ಗಹನವಾದ ಪ್ರಶ್ನೆಯಾಗಿದೆ.

ಯೋಷಿಯಂಥ ಸ್ತ್ರೀಯ ಪ್ರಾಣವಾಯು ಹಾರುವವರೆಗೂ ಕಣ್ತೆರೆದು ನೋಡದ ಯೋಷಿಯ ಪತಿ ಪೃಥ್ವಿರಾಜನ ಮನೋಧೋರಣೆಯನ್ನು ಹಲವು ಆಯಾಮಗಳಲ್ಲಿ ಗ್ರಹಿಸಬಹುದು. ಅದು ಪುರುಷನ ಅಸಹಾಯಕತೆಯೇ? ತನ್ನ ಅಧಿಕಾರದ ಸ್ಥಾನ ಭದ್ರವಾಗಿ ಉಳಿಯಬೇಕೆನ್ನುವ ಸ್ವಾರ್ಥಸಾಧನೆಯೇ? ಅಥವಾ ತನ್ನ ಪತ್ನಿಯ ಮನದಾಳವನ್ನು ಗ್ರಹಿಸುವಲ್ಲಿ ಸೋತ ಸಂಗಾತಿಯ ಮನೋಭಾವವೇ? ಎಂಬ ಪ್ರಶ್ನೆಗಳು ಇಲ್ಲಿ ಉದ್ಭವಿಸುತ್ತವೆ.

**ಸ್ತ್ರೀ ಮಾನ ಮತ್ತು ಆತ್ಮತ್ಯಾಗ**

ಸ್ತ್ರೀಯ ಮಾನದ ಪ್ರಶ್ನೆ ಎದುರಾದಾಗ ಮನಸ್ಸಿನಲ್ಲಿ ಉದ್ಭವಿಸುವ ಎರಡು ಸಹಜ ಕ್ರಿಯಾಮಾರ್ಗಗಳೆಂದರೆ—ಒಂದು, ಮಾನಕ್ಕೆ ಒದಗಿದ ಅಪಮಾನದ ವಿರುದ್ಧ ಸಿಡಿದೇಳುವುದು; ಮತ್ತೊಂದು, ಮಾನಾಪಮಾನದ ಅಗ್ನಿಗೆ ಗುರಿಯಾಗುವುದಕ್ಕಿಂತ ಆತ್ಮಾಹುತಿ ಮಾಡಿಕೊಳ್ಳುವುದು. ಇವೆರಡೂ ಸ್ತ್ರೀ ಎದುರಿಸುವ ಸವಾಲುಗಳಾಗಿವೆ.

ಇಲ್ಲಿ ಯೋಷಿಯ ಪತಿಯಾದ ಪೃಥ್ವಿರಾಜನ ಮಾತುಗಳು ಗಮನಾರ್ಹವಾಗಿವೆ: "ಪೈಶಾಚಿಕ ಆಶೆಯಿಂದ ಸಾಮ್ರಾಟ ಯೋಷಿಯ ಮೇಲೆ ಕೈಹಾಕಲು, ಚೂರಿಯಿಂದ ಅವಳು ತನ್ನ ಅಮೂಲ್ಯವಾದ ಮಾನವನ್ನು ಕಾಪಾಡಿಕೊಂಡಳು. ನಿನ್ನೆಯ ದಿವಸ ನನಗೆ ತನ್ನ ಸಂದೇಶವನ್ನಿತ್ತು ಆತ್ಮಾರ್ಪಣೆ ಮಾಡಿಬಿಟ್ಟಳು."

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅನೇಕ ಮಹಾತ್ಮರು ಅಮರಣಾಂತ ಉಪವಾಸವನ್ನು ಮಾಡಿ ದೇಹತ್ಯಾಗ ಮಾಡಿದ ಸಾತ್ವಿಕ ಹೋರಾಟದಂತೆ, ಯೋಷಿಯ ಆತ್ಮತ್ಯಾಗವೂ ಕೇವಲ ವೈಯಕ್ತಿಕ ಮಾನಕ್ಕಾಗಿ ಮಾತ್ರವಲ್ಲ; ದೇಶದ ಸ್ಥಿತಿ ಹಾಗೂ ರಾಜಕಾರಣ ಬದಲಾಗಬೇಕೆಂಬ ಆಶಯದ ಸಂಕೇತವಾಗಿ ಇಲ್ಲಿ ನಿರೂಪಿತವಾಗಿದೆ. ದೇಹತ್ಯಾಗಕ್ಕೂ ಇಂಥ ದೊಡ್ಡ

ಪ್ರತಿರೋಧದ ಶಕ್ತಿಯಿದೆ ಎಂಬುದಕ್ಕೆ ಚರಿತ್ರೆಯ ಪುಟಗಳು ಸಾಕ್ಷಿಯಾಗಿವೆ.

**ಪೃಥ್ವಿರಾಜನ ರಾಜಕೀಯ ಜಾಗೃತಿ**

ಕಥೆಯ ಅಂತ್ಯದಲ್ಲಿ ಪೃಥ್ವಿರಾಜನ ಆಗಮನದಿಂದ ಉಂಟಾಗುವ ಪರಿಣಾಮಗಳು ಕಥೆಯ ಮಹತ್ವದ ವಿಚಾರವನ್ನು ಪ್ರಸ್ತಾಪಿಸುತ್ತವೆ. ಅಕ್ಬರನ ಆಸ್ಥಾನಕವಿಯೂ ಯೋಷಿಯ ಪತಿಯೂ ಆಗಿದ್ದ ಪೃಥ್ವಿ ಅಂತಿಮವಾಗಿ ಸನ್ಯಾಸಿಯ ವೇಷಧಾರಿಯಾಗಿ ನಡೆಯುತ್ತಿದ್ದ ಅಕ್ಬರನ ವಿಜಯೋತ್ಸವದಲ್ಲಿ ಕಾಣಿಸಿಕೊಂಡು ಸಾಮ್ರಾಟನ ಮೇಲೆ ಬಾಣಪ್ರಯೋಗ ಮಾಡುವ ಮೂಲಕ ತನ್ನ ಆಕ್ರೋಶವನ್ನು ಹೊರಹಾಕುತ್ತಾನೆ.

ಕಥೆಯ ಪ್ರಾರಂಭದಲ್ಲಿ ಸಾಮ್ರಾಟನ ವಿರುದ್ಧ ಸಣ್ಣ ಧ್ವನಿಯನ್ನೂ ಎತ್ತದವನು, ರಾಜಕೀಯ ನಡವಳಿಕೆಯನ್ನು ಧೈರ್ಯದಿಂದ ಪ್ರಶ್ನಿಸದೆ ಅದನ್ನು ಸಮರ್ಥಿಸಿಕೊಳ್ಳುವವನಾಗಿದ್ದ ಪೃಥ್ವಿ ಕಣ್ತೆರೆದ ಬಗೆ ಕಥೆಯ ಬಹುಮುಖ್ಯ ಭಾಗವೆಂದೇ ಹೇಳಬಹುದು. “ಹೌದು ಪೃಥ್ವಿಯೇ, ಹೌದು ನಿನ್ನ ಪ್ರಾಣಾಪಹರಣ. ಅಧಮಾ, ಯೋಷಿಯ ಮಾನವನ್ನು ಬಲವಂತದಿಂದ ಕದಿಯಲೆತ್ನಿಸಿದೆಯಲ್ಲಾ, ಅದಕ್ಕೆ ಸೇಡು. ನನ್ನ ಕೈಯಲ್ಲೇ ನೀನು ಸಾಯುವೆ” ಎಂಬ ಮಾತಿನಲ್ಲಿ ತನ್ನ ಬಾಳಸಂಗಾತಿಯನ್ನು ಕಳೆದುಕೊಂಡ ಆಕ್ರೋಶದ ತೀವ್ರತೆಯಿದೆ.

ಈ ವಾಸ್ತವವನ್ನು ಸಾಮ್ರಾಟನ ಮುಂದೆ ನಿರೂಪಿಸಿದ ಪೃಥ್ವಿಯ ಮಾತಿಗೆ ಅಷ್ಟೇ ತೀವ್ರಗತಿಯಲ್ಲಿ ತನ್ನ ನಿರ್ಧಾರವನ್ನು ಹೊರಹಾಕುವ ಮೂಲಕ ಅಕ್ಬರ್, “ಕರೆದೊಯ್ಯಿರಿ ಶೂಲದ ಮರಕ್ಕೆ” ಎಂದು ಆಜ್ಞಾಪಿಸುತ್ತಾನೆ. ರಾಜಕಾರಣದ ನೆಪದಲ್ಲಿ ನಡೆಯುವ ಲೋಪ–ದೋಷಗಳು ಜಗತ್ತಿನ ಮುಂದೆ ಬಯಲಾಗುವುದನ್ನು ಸಹಿಸದ ಅಕ್ಬರನ ಸ್ವಭಾವವು, ನ್ಯಾಯದ ಮೊರೆ ಹೋಗುವ ಹಾಗೂ ಅನ್ಯಾಯದ ವಿರುದ್ಧ ಬಂಡೇಳುವ ವ್ಯಕ್ತಿಗಳನ್ನು ಹತ್ತಿಕ್ಕುವ ಅಧಿಕಾರ ಮನೋಭಾವದ ಸಾಕ್ಷಿಯಾಗಿ ಅಭಿವ್ಯಕ್ತವಾಗುತ್ತದೆ.

ಪೃಥ್ವಿರಾಜನ ಪ್ರತಿರೋಧವು ಸ್ವಯಂ ಬಂದದ್ದಲ್ಲ; ಅದಕ್ಕೆ ಕಾರಣೀಕರ್ತಳಾದವಳು ಸ್ತ್ರೀ ಎಂಬುದು ಗಮನಾರ್ಹ. ಈ ಪ್ರತಿರೋಧ ಕೇವಲ ಅಧಿಕಾರದ ನೆಪದಲ್ಲಿ ಸ್ತ್ರೀಯರ ಮಾನಕ್ಕೆ ಕೈಹಾಕಿದ ಅಕ್ಬರನ ವಿರುದ್ಧವಲ್ಲ; ಒಟ್ಟಾರೆ ಆತನ ರಾಜಕಾರಣದ ದೌರ್ಬಲ್ಯವನ್ನು ಸ್ತ್ರೀಯೊಬ್ಬಳು ಧೈರ್ಯದಿಂದ ಮುಖಾಮುಖಿಗೊಂಡ ಚಿತ್ರಣವಾಗಿದೆ. ಸ್ತ್ರೀಯಾಗಲಿ, ಪುರುಷನಾಗಲಿ, ರಾಜಕಾರಣದ ಉದ್ದೇಶ ದುರುದ್ದೇಶವಾಗಿ ಬದಲಾದಾಗ ಅದನ್ನು ಪ್ರತಿರೋಧಿಸುವ ಸಹಜ ಧರ್ಮ ಮಾನವನದ್ದಾಗಬೇಕು ಎಂಬ ಆಶಯದ ರೂಪವಾಗಿ ಇಲ್ಲಿನ ಸ್ತ್ರೀ ಕಾಣಿಸಿಕೊಂಡಿರುವುದು ಗಮನಾರ್ಹ.

**ಉಪಸಂಹಾರ**

ಹಾಗಾಗಿ ರಾಜಕಾರಣ ಸಮಾಜಮುಖಿಯಾಗಿದ್ದರೆ ಹಾಗೂ ಸರ್ವರನ್ನು ಒಳಗೊಂಡಿದ್ದರೆ, ಸ್ವಾರ್ಥಗಳಿಂದ ದೂರವಿದ್ದರೆ ಮಾತ್ರ ಗೌರವ ಮತ್ತು ಘನತೆಗೆ ಅರ್ಹವಾಗುತ್ತದೆ. ಇಲ್ಲವಾದರೆ ಇಂಥ ಸಂಘರ್ಷಗಳು ರಾಜಕಾರಣದಲ್ಲಿ ಅನಿವಾರ್ಯವಾಗಿ ಎದುರಾಗುತ್ತವೆ. ಈ ನೆಲೆಯಲ್ಲಿ ರಾಜಕಾರಣವನ್ನು ಪ್ರಶ್ನಿಸುವ ಹಾಗೂ ಮುಖಾಮುಖಿಗೊಳ್ಳುವ ಸ್ತ್ರೀಯ ವಿಚಾರಪರತೆ ಪ್ರಸ್ತುತದಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಹೀಗೆ ಪ್ರಶ್ನಿಸುವ, ಪ್ರತಿರೋಧಿಸುವ ಹಾಗೂ ವಾಸ್ತವವನ್ನು ಅಭಿವ್ಯಕ್ತಿಸುವ ಸಹಜ ಶಕ್ತಿಯನ್ನು ಹರಣ ಮಾಡುವ ರಾಜಕಾರಣವು ಸಾಮಾನ್ಯರ ಹಕ್ಕನ್ನು ಕಸಿದುಕೊಂಡಂತೆ. ಇಲ್ಲಿನ ಅಧಿಕಾರದ ಅಹಂಕಾರವು ಸಮಾಜದ ನೈತಿಕ ಅಧಃಪತನಕ್ಕೆ ಎಡೆಮಾಡಿಕೊಡುತ್ತದೆ. ಸಮಾಜವು ನೈತಿಕ ಹಾದಿಯಲ್ಲಿ ಸಾಗಬೇಕಾದರೆ, ರಾಜಕಾರಣದ ಪ್ರಮುಖ ಆಯಾಮವಾಗಿರುವ ಸ್ತ್ರೀಯ ಬಗೆಗಿನ ನೋಟವು ನೈತಿಕತೆ ಮತ್ತು ಸಮಾನತೆಯಿಂದ ಕೂಡಿರಬೇಕು. ಈ ದೃಷ್ಟಿಯಲ್ಲಿ ‘ಪುನರ್ಜೀವನ’ ಕಥೆಯು ಸ್ತ್ರೀ ಅಸ್ಮಿತೆ, ಸ್ವಾತಂತ್ರ್ಯ, ಪ್ರತಿರೋಧ ಮತ್ತು

ರಾಜಕೀಯ ನೈತಿಕತೆಯನ್ನು ಮುಖಾಮುಖಿಗೊಳಿಸುವ ಮೂಲಕ ಸಾಮಾಜಿಕ–ನೈತಿಕ ರಾಜಕಾರಣದ ಅಗತ್ಯವನ್ನು ಪ್ರತಿಪಾದಿಸುವಲ್ಲಿ ಗಮನಾರ್ಹವಾಗಿದೆ.

**ಆಕರ ಗ್ರಂಥ**


- ಅ.ನ.ಕೃ. (2005). ಅ.ನ.ಕೃ. ಅವರ ಸಮಗ್ರ ಕಥಾ ಸಂಕಲನ. (ಸಂ: ಕೆ.ಟಿ. ಚಂದ್ರಶೇಖರ್) ಸಾಗರ ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಆಮೂರ, ಜಿ.ಎಸ್. (2012). *ಕನ್ನಡ ಕಥನ ಸಾಹಿತ್ಯ: ಸಣ್ಣಕತೆ.* ಪ್ರಿಯದರ್ಶಿನಿ ಪ್ರಕಾಶನ.
- ಗಾಯತ್ರಿ, ಎನ್. (1991). *ಮಹಿಳೆ ಬಿಡುಗಡೆಯ ಹಾದಿಯಲ್ಲಿ.* ನವಕರ್ನಾಟಕ ಪ್ರಕಾಶನ.
- ನಾವಡ, ಗಾಯತ್ರಿ. (2003). *ಮಹಿಳಾ ಸಂಕಥನ.* ಕನ್ನಡ ಪುಸ್ತಕ ಪ್ರಾಧಿಕಾರ.